# All India Radio: Bangalore
# National Bulletins In Kannada
# 22.07.2025 / 19.35 hrs

## ಆಕಾಶವಾಣಿ, ಬೆಂಗಳೂರು
## ರಾಷ್ಟ್ರೀಯ ವಾರ್ತೆಗಳು
22.07.2025 / 19.35 hrs

<><*<><>*><>

ಮುಖ್ಯಾಂಶಗಳು

**೧. ಸಂಸತ್ತಿನ ಉಭಯ ಸದನಗಳಲ್ಲಿಂದು ವಿಪಕ್ಷಗಳ ಗದ್ದಲ ಮುಂದುವರಿಕೆ; ನಾಳೆಗೆ ಕಲಾಪ ಮುಂದೂಡಿಕೆ**

**೨. ಪ್ರಧಾನಿ ನರೇಂದ್ರ ಮೋದಿ ನಾಳೆಯಿಂದ ಬ್ರಿಟನ್ ಪ್ರವಾಸ; ದ್ವಿಪಕ್ಷೀಯ ಸಂಬಂಧಗಳ ವೃದ್ಧಿ ಕುರಿತಂತೆ ಚರ್ಚೆ**

**೩. ಮಸೂದೆಗಳ ಕುರಿತು ರಾಷ್ಟ್ರಪತಿ, ರಾಜ್ಯಪಾಲರಿಗೆ ಕಾಲಮಿತಿ ವಿಧಿಸುವ ಕುರಿತಂತೆ ಕೇಂದ್ರ, ರಾಜ್ಯ ಸರ್ಕಾರಗಳಿಗೆ ಸುಪ್ರೀಂಕೋರ್ಟ್ ನೋಟೀಸ್**

**೪. ಪರಿಶಿಷ್ಟ ಸಮುದಾಯ ಹಾಗೂ ಮಹಿಳಾ ಉದ್ಯಮಿಗಳಿಗೆ ೨೮ ಸಾವಿರದ ೯೬೬ ಕೋಟಿ ಸಾಲ ಮಂಜೂರು- ಸಚಿವೆ ನಿರ್ಮಲಾ ಸೀತಾರಾಮನ್**

**೫. ಮಹಿಳಾ ಏಕದಿನ ಕ್ರಿಕೆಟ್ ಸರಣಿ; ಮೂರನೇ ಪಂದ್ಯದಲ್ಲಿಂದು ಇಂಗ್ಲೆಂಡ್ ವಿರುದ್ಧ ಗೆಲುವಿನ ತವಕದಲ್ಲಿ ಭಾರತ**

<><*<><>*><>

ಸಂಸತ್ತಿನ ಉಭಯ ಸದನಗಳಲ್ಲಿಂದು ವಿರೋಧ ಪಕ್ಷಗಳು, ವಿವಿಧ ವಿಷಯಗಳನ್ನು ಮುಂದಿಟ್ಟುಕೊಂಡು ಗದ್ದಲ ಎಬ್ಬಿಸಿದ ಹಿನ್ನೆಲೆ ಸದನವನ್ನು ಹಲವು ಬಾರಿ ಮುಂದೂಡಿ, ಕೊನೆಗೆ ದಿನದ ಮಟ್ಟಿಗೆ ಮುಂದೂಡಲಾಯಿತು. ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳು ಆಪರೇಷನ್ ಸಿಂದೂರ್, ಬಿಹಾರದಲ್ಲಿ ವಿಶೇಷ ತೀವ್ರ ಪರಿಶೀಲನೆ ಹಾಗೂ ವಿವಿಧ ಪ್ರಮುಖ ವಿಷಯಗಳ ಕುರಿತು ಚರ್ಚೆಗೆ ಆಗ್ರಹಿಸಿದರು. ಲೋಕಸಭೆಯಲ್ಲಿ ಮಧ್ಯಾಹ್ನ ೨ ಗಂಟೆಯ ವೇಳೆಗೆ ಸದನ ಪುನಃ ಸೇರಿದಾಗ ವಿರೋಧ ಪಕ್ಷಗಳು ಈ ವಿಷಯಗಳನ್ನು ಮುಂದಿಟ್ಟುಕೊಂಡು ಪುನಃ ಘೋಷಣೆಗಳನ್ನು ಕೂಗಲಾರಂಭಿಸಿದರು. ಪೀಠಾಸೀನಾಧಿಕಾರಿ, ಸದಸ್ಯರಿಗೆ ಸದನ ಸುಗಮವಾಗಿ ನಡೆಸಲು ಸಹಕರಿಸುವಂತೆ ಮನವಿ ಮಾಡಿದರು. ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಸದನದ ಸುಗಮ ಕಾರ್ಯಕಲಾಪಕ್ಕೆ ಅಡ್ಡಿಪಡಿಸಿರುವುದನ್ನು ಖಂಡಿಸಿ, ವಿರೋಧ ಪಕ್ಷಗಳು, ಸುಗಮ ಚರ್ಚೆ ನಡೆಸಲು ಬಯಸುತ್ತಿಲ್ಲ ಎಂದು ಆಪಾದಿಸಿದರು. ಆಪರೇಷನ್ ಸಿಂದೂರ್ ಕುರಿತಂತೆ ಚರ್ಚೆ ನಡೆಸಲು ಈಗಾಗಲೇ ನಿರ್ಧರಿಸಲಾಗಿದೆ. ಸರ್ಕಾರ, ಈ ಕುರಿತು ಚರ್ಚೆ ನಡೆಸಲು ಸಿದ್ಧವಿದ್ದರೂ ವಿರೋಧ ಪಕ್ಷಗಳು ಕಲಾಪವನ್ನು ಅಡ್ಡಿಸುತ್ತಿರುವುದು ಏತಕ್ಕೆ ಎಂದು ಪ್ರಶ್ನಿಸಿದರು. ಪೀಠಾಸೀನಾಧಿಕಾರಿ, ಪ್ರಸ್ತಾಪಿತ ವಿಷಯಗಳ ಕುರಿತು ಅವಕಾಶ ಕಲ್ಪಿಸುವ ಭರವಸೆ ನೀಡಿದರೂ, ವಿರೋಧಪಕ್ಷಗಳ ಘೋಷಣೆಗಳು ನಿಲ್ಲದ ಪರಿಣಾಮ ಸದನವನ್ನು ನಾಳೆಗೆ ಮುಂದೂಡಿದರು. ರಾಜ್ಯಸಭೆಯೂ, ಇಂದು ಇದೇ ಘಟನೆಗಳಿಗೆ ಸಾಕ್ಷಿಯಾಯಿತು. ಬೆಳಗ್ಗೆ ೧೧ ಗಂಟೆಗೆ ಸದನ ಸಭೆ ಸೇರಿದಾಗ ಕಾಂಗ್ರೆಸ್, ಡಿಎಂಕೆ, ಆರ್‌ಜೆಡಿ, ಸಮಾಜವಾದಿ ಪಕ್ಷ ಸೇರಿದಂತೆ ಮತ್ತಿತರ ಪಕ್ಷಗಳು ಘೋಷಣೆ ಕೂಗಲು ಆರಂಭಿಸಿದವು. ಉಪಸಭಾಪತಿ ಹರಿವಂಶ್ ನಾರಾಯಣ್ ಸಿಂಗ್, ಪ್ರತಿಭಟನಾ ನಿರತ ಸದಸ್ಯರಿಗೆ ಸುಗಮ ಕಲಾಪ ನಡೆಸಲು ಅನುವು ಮಾಡಿಕೊಡುವಂತೆ ಕೋರಿದರೂ, ಗದ್ದಲ ಮುಂದುವರಿದ ಬೆನ್ನಲ್ಲೇ ಸದನವನ್ನು ಮೊದಲಿಗೆ ಮಧ್ಯಾಹ್ನ ೧೨ ಗಂಟೆಗೆ, ನಂತರ ೨ ಗಂಟೆಯವರಿಗೆ ಮುಂದೂಡಿದರು. ಪೀಠಾಸೀನಾಧಿಕಾರಿ ಘನಶ್ಯಾಮ್ ತಿವಾರಿ, ಪ್ರಶ್ನೋತ್ತರ ಕಲಾಪ ಕೈಗೆತ್ತಿಕೊಳ್ಳಲು ಪ್ರಯತ್ನಿಸಿದರಾದರೂ, ವಿಪಕ್ಷಗಳ ಮುಂದುವರಿದ ಗದ್ದಲದ ಪರಿಣಾಮ ಸಾಧ್ಯವಾಗಲಿಲ್ಲ. ಈ ನಡುವೆ, ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರ ರಾಜೀನಾಮೆ ಕುರಿತ ಗೃಹ ಸಚಿವಾಲಯದ ಅಧಿಸೂಚನೆ ಕುರಿತು ಸದನಕ್ಕೆ ತಿಳಿಸಲಾಯಿತು. ವಿಪಕ್ಷಗಳ ಗದ್ದಲದ ನಡುವೆ ಅಂತಿಮವಾಗಿ ಕಲಾಪವನ್ನು ನಾಳೆಗೆ ಮುಂದೂಡಲಾಯಿತು.

<><*<><>*><>

ಪ್ರಧಾನಿ ನರೇಂದ್ರ ಮೋದಿ ನಾಳೆಯಿಂದ ಬ್ರಿಟನ್ ಹಾಗೂ ಮಾಲ್ಡೀವ್ಸ್‌ಗೆ ಅಧಿಕೃತ ಪ್ರವಾಸ ಕೈಗೊಳ್ಳಲಿದ್ದಾರೆ. ತಮ್ಮ ಭೇಟಿಯ ಮೊದಲ ಚರಣದಲ್ಲಿ ಪ್ರಧಾನಿ, ಬ್ರಿಟನ್‌ಗೆ ಭೇಟಿ ನೀಡಲಿದ್ದು, ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದು, ಬ್ರಿಟನ್ ದೊರೆ ಮೂರನೇ ಚಾರ್ಲ್ಸ್ ಅವರನ್ನು ಭೇಟಿ ಮಾಡಲಿದ್ದಾರೆ. ನವದೆಹಲಿಯಲ್ಲಿಂದು ಪ್ರಧಾನಿಯವರ ಪ್ರವಾಸದ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ಪ್ರಧಾನಿ ನರೇಂದ್ರ ಮೋದಿ ಅವರು ಬ್ರಿಟನ್ ಮತ್ತು ಭಾರತದ ಉದ್ಯಮ ನಾಯಕರೊಂದಿಗೆ ಸಂವಾದ ನಡೆಸಲಿದ್ದಾರೆ. ಬ್ರಿಟನ್‌ಗೆ ಪ್ರಧಾನಿ

ಕೈಗೊಳ್ಳುತ್ತಿರುವ ನಾಲ್ಕನೇ ಭೇಟಿ ಇದಾಗಿದೆ ಎಂದು ತಿಳಿಸಿದ್ದಾರೆ. ಬ್ರಿಟನ್‌ನ ಉಭಯ ನಾಯಕರೊಂದಿಗಿನ ಸಭೆಗಳು ಪ್ರಧಾನಿಯವರಿಗೆ ಭಾರತ-ಬ್ರಿಟನ್ ನಡುವಿನ ದ್ವಿಪಕ್ಷೀಯ ಸಂಬಂಧಗಳು ಹಾಗೂ ಅದನ್ನು ಬಲಪಡಿಸುವ ಕುರಿತಂತೆ ಪರಿಶೀಲನೆ ನಡೆಸಲು ಅವಕಾಶ ಕಲ್ಪಿಸುತ್ತದೆ. ಈ ಸಭೆಗಳು ವೇಳೆ ಪ್ರಧಾನಿ, ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಹಾಗೂ ಜಾಗತಿಕ ಸವಾಲುಗಳು ಕುರಿತು ಅಭಿಪ್ರಾಯ ವಿನಿಮಯ ಮಾಡಿಕೊಳ್ಳಲಿದ್ದಾರೆ. ೨೦೨೧ರಲ್ಲಿ ಭಾರತ-ಬ್ರಿಟನ್ ಪಾಲುದಾರಿಕೆಯನ್ನು, ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯಾಗಿ ಉನ್ನತೀಕರಿಸಲಾಗಿದ್ದು, ಈ ಸಂಬಂಧವನ್ನು ಮತ್ತಷ್ಟು ಬಲಪಡಿಸಲು ಉಭಯ ಕಡೆಯವರು ಬದ್ಧರಾಗಿದ್ದಾರೆ ಎಂದು ಹೇಳಿದರು. ಇತ್ತೀಚಿಗೆ ಗುರುಗ್ರಾಮ್‌ದಲ್ಲಿ ನೂತನ ಕ್ಯಾಂಪಸ್ ತೆರೆದ ಸೌತ್ಯಾಂಪ್ಟನ್ ವಿಶ್ವವಿದ್ಯಾಲಯ, ನೂತನ ಶಿಕ್ಷಣ ನೀತಿಯಡಿ ಭಾರತದಲ್ಲಿ ಸ್ಥಾಪಿತವಾದ ಮೊದಲ ವಿದೇಶಿ ವಿಶ್ವವಿದ್ಯಾಲಯವಾಗಿದೆ. ಈ ವಿಶ್ವವಿದ್ಯಾಲಯದ ಜೊತೆ ಬ್ರಿಟನ್ ಹಲವು ಇನ್ನಿತರ ವಿಶ್ವವಿದ್ಯಾಲಯಗಳು, ಭಾರತದಲ್ಲಿ ತಮ್ಮ ಕ್ಯಾಂಪಸ್ ಸ್ಥಾಪಿಸಲು ಚಿಂತನೆ ನಡೆಸಿವೆ. ಭಾರತಕ್ಕೆ ಬ್ರಿಟನ್ ಆರನೇ ಅತಿ ದೊಡ್ಡ ಹೂಡಿಕೆದಾರ ರಾಷ್ಟ್ರವಾಗಿದೆ ಎಂದು ವಿಕ್ರಮ್ ಮಿಸ್ರಿ ಮಾಹಿತಿ ನೀಡಿದರು.

**ಧ್ವನಿ; ವಿಕ್ರಮ್ ಮಿಸ್ರಿ ( ೩೦ ಸೆಕೆಂಡ್ಸ್)**

ತಮ್ಮ ಪ್ರವಾಸದ ಎರಡನೇ ಚರಣದಲ್ಲಿ ಪ್ರಧಾನಿ, ಇದೇ ೨೫ ರಿಂದ ಮಾಲ್ಡೀವ್ಸ್‌ಗೆ ಭೇಟಿ ನೀಡಲಿದ್ದಾರೆ. ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರ ಆಹ್ವಾನ ಮೇರಿಗೆ ಇದೇ ೨೬ರಂದು ನಡೆಯಲಿರುವ ಮಾಲ್ಡೀವ್ಸ್‌ನ ೬೦ನೇ ಸ್ವಾತಂತ್ರ್ಯೋತ್ಸವ ವರ್ಷಾಚರಣೆಯಲ್ಲಿ ಗೌರವ ಅತಿಥಿಯವಾಗಿ ಪಾಲ್ಗೊಳ್ಳಲಿದ್ದಾರೆ. ಭೇಟಿಯ ವೇಳೆ ಪ್ರಧಾನಿ, ಅಧ್ಯಕ್ಷ ಮುಯಿಝು ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದು, ವಿವಿಧ ಮೂಲಸೌಕರ್ಯ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ. ಭಾರತ ಪಾಲಿಗೆ ಮಾಲ್ಡೀವ್ಸ್, ನೆರೆಹೊರೆ ಮೊದಲು ನೀತಿ ಮತ್ತು ಮಹಾಸಾಗರ ದೃಷ್ಟಿಕೋನದಡಿ ಒಂದು ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ. ಭಾರತ ಹಾಗೂ ಮಾಲ್ಡೀವ್ಸ್ ನಡುವಿನ ದ್ವಿಪಕ್ಷೀಯ ವ್ಯಾಪಾರ ಸುಮಾರು ೫೦೦ ದಶಲಕ್ಷ ಡಾಲರ್ ಮೌಲ್ಯದಷ್ಟಿದೆ ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಮಾಹಿತಿ ನೀಡಿದ್ದಾರೆ.

**<><*<><>*><>**

ಸಂವಿಧಾನದಲ್ಲಿ ನಿರ್ದಿಷ್ಟ ಕಾಲಮಿತಿಯ ಉಲ್ಲೇಖವಿಲ್ಲದಿರುವ ಸಂದರ್ಭದಲ್ಲಿ ರಾಜ್ಯಪಾಲರು ಹಾಗೂ ರಾಷ್ಟ್ರಪತಿಗಳಿಗೆ ಮಸೂದೆಗಳ ಬಗ್ಗೆ ಕ್ರಮವಹಿಸಲು ಕಾಲಮಿತಿ ವಿಧಿಸುವ ಕುರಿತಂತೆ ಇಂದು ಸರ್ವೋಚ್ಚ ನ್ಯಾಯಾಲಯ, ಕೇಂದ್ರ ಸರ್ಕಾರ ಹಾಗೂ ಎಲ್ಲ ರಾಜ್ಯ ಸರ್ಕಾರಗಳಿಗೆ ನೋಟೀಸ್ ಜಾರಿ ಮಾಡಿದೆ. ತಮಿಳುನಾಡು ಸರ್ಕಾರದ ವಿಧೇಯಕಗಳ ವಿಚಾರದಲ್ಲಿ ಹೊರಬಂದ ತೀರ್ಪಿನ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಕಳೆದ ಮೇ ನಲ್ಲಿ ಸಂವಿಧಾನದಡಿ ಮಸೂದೆಗಳ ಕುರಿತು ಕ್ರಮವಹಿಸಲು ರಾಷ್ಟ್ರಪತಿ ಹಾಗೂ ರಾಜ್ಯಪಾಲರಿಗೆ ಲಭ್ಯವಿರುವ ಸಂವಿಧಾನಾತ್ಮಕ ಆಯ್ಕೆಗಳ ಬಗ್ಗೆ ಸುಪ್ರೀಂಕೋರ್ಟ್‌ನಿಂದ ಸಲಹೆ ಕೇಳಿದ್ದರು. ಕಳೆದ ಏಪ್ರಿಲ್‌ನಲ್ಲಿ ಸುಪ್ರೀಂಕೋರ್ಟ್‌ನ ಇಬ್ಬರು ನ್ಯಾಯಮೂರ್ತಿಗಳ ನ್ಯಾಯಪೀಠ, ತಮಿಳುನಾಡು ಸರ್ಕಾರ ಹಾಗೂ ರಾಜ್ಯಪಾಲ ಆರ್.ಎನ್.ರವಿ ನಡುವಿನ ಮಸೂದೆಗಳ ಅಂಗೀಕಾರದಲ್ಲಾದ ವಿಳಂಬಕ್ಕೆ ಸಂಬಂಧಪಟ್ಟ ಪ್ರಕರಣವನ್ನು ಪರಿಹರಿಸಿತ್ತು. ಈ ವೇಳೆ, ತಮಿಳುನಾಡು ವಿಧಾನಸಭೆ ಅಂಗೀಕರಿಸಿದ್ದ ಹತ್ತು ಮಸೂದೆಗಳಿಗೆ ರಾಜ್ಯಪಾಲರು ಅಂಗೀಕಾರ ನೀಡಲು ನಿರಾಕರಿಸಿದ ಕ್ರಮವನ್ನು ಅಸಾಂವಿಧಾನಿಕ ಎಂದು ಘೋಷಿಸಿತ್ತು. ಒಂದು ಮಸೂದೆ, ರಾಜ್ಯಪಾಲರಿಂದ ಹಿಂತಿರುಗಿಸ್ಪಟ್ಟ ಬಳಿಕ ರಾಜ್ಯ ವಿಧಾನಮಂಡಲದಲ್ಲಿ ಪುನರ್ ಅಂಗೀಕಾರಗೊಂಡು, ರಾಜ್ಯಪಾಲರೆದುರು ಬಂದಲ್ಲಿ ಅದನ್ನು ರಾಷ್ಟ್ರಪತಿಗಳ ಗಣನೆಗೆ ಮೀಸಲಿಡುವ ಅವಕಾಶವಿರುವುದಿಲ್ಲ ಎಂದು ಸುಪ್ರೀಂಕೋರ್ಟ್ ಸ್ಪಷ್ಟಪಡಿಸಿತ್ತು ಹಾಗೂ ಇದೇ ವೇಳೆ, ಸದನದಲ್ಲಿ ಎರಡು ಬಾರಿ ಅಂಗೀಕಾರಗೊಳ್ಳುವ ಮಸೂದೆಗಳ ಕುರಿತು ಕ್ರಮವಹಿಸಲು ರಾಷ್ಟ್ರಪತಿಗಳಿಗೆ ಮೂರು ತಿಂಗಳ ಗಡುವು ನಿಗದಿಪಡಿಸಿತು.

**<><*<><>*><>**

’ಸ್ಟ್ಯಾಂಡ್ ಅಪ್ ಇಂಡಿಯಾ’ ಯೋಜನೆಯಡಿ ೨೦೨೨ ರ ಏಪ್ರಿಲ್‌ನಿಂದ ೨೦೨೫ ರ ಮಾರ್ಚ್ ತಿಂಗಳವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಮಹಿಳಾ ಉದ್ಯಮಿಗಳಿಗೆ ೨೮ ಸಾವಿರದ ೯೬೬ ಕೋಟಿ ರೂಪಾಯಿ ಸಾಲವನ್ನು ಮಂಜೂರು ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ರಾಜ್ಯಸಭೆಗೆ ತಿಳಿಸಿದ್ದಾರೆ.

**<><*<><>*><>**

ಇಂಗ್ಲೆಂಡ್‌ನ ಚೆಸ್ಟರ್ ಲೇ ಸ್ಟ್ರೀಟ್‌ನಲ್ಲಿಂದು ನಡೆಯುತ್ತಿರುವ ಏಕದಿನ ಕ್ರಿಕೆಟ್ ಸರಣಿಯ ೩ನೇ ಹಾಗೂ ಕೊನೆಯ ಪಂದ್ಯದಲ್ಲಿ ವನಿತೆಯರ ತಂಡಗಳು ಮುಖಾಮುಖಿಯಾಗಿವೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>**